# KARNATAKA LOKAYUKTA

No.UPLOK-2/DE.947/2017/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 15.02.2022.

## RECOMMENDATION

Sub:- Departmental inquiry against Sri R.Nagaraju, Panchayath Development Officer, Kodigenahalli Grama Panchayath, Madhugiri Taluk, Tumkur District - reg.

Ref:- 1) Government Order No.RDP 542 GPS 2017 dt.12.07.2017.

2) Nomination order No. UPLOK-2/DE.947/2017 dated 18.08.2017 of Upalokayukta, State of Karnataka.

3) Inquiry report dated 10.02.2022 of Additional Registrar of Enquiries-14, Karnataka Lokayukta, Bengaluru.

~~~~~

The Government by its order dated 12.07.2017 initiated the disciplinary proceedings against Sri R.Nagaraju, Panchayath Development Officer, Kodigenahalli Grama Panchayath, Madhugiri Taluk, Tumkur District, [hereinafter referred to as Delinquent Government Official, for short as 'DGO' ] and entrusted the departmental inquiry to this Institution.
~~~~~

2. This Institution by Nomination UPLOK-2/DE.947/2017 dated 18.08.2017 nominated Additional Registrar of Enquiries-7, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him. Subsequently, the matter was transferred to Additional Registrar of Enquiries-11 for continuing the said enquiry.

3. The DGO was tried for the charge of failing to produce documents showing the action taken for collecting solid waste, maintenance of street lights and taking up drainage work and thereby committed misconduct.

4. The Inquiry Officer (Additional Registrar of Enquiries-11) on proper appreciation of oral and documentary evidence has held that, the above charge against the DGO Sri R.Nagaraju, Panchayath Development Officer, Kodigenahalli Grama Panchayath, Madhugiri Taluk, Tumkur District, is ' not proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Enquiry Officer and exonerate DGO Sri R.Nagaraju, Panchayath Development Officer, Kodigenahalli Grama Panchayath, Madhugiri Taluk, Tumkur District of the charges leveled against him.

6. Action taken in the matter shall be intimated to this Authority.

Connected records are enclosed herewith.

15/2/22

(JUSTICE B.S.PATIL)
Upalokayukta,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ–947/2017/ಎ.ಆರ್.ಇ–14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 10/02/2022.

## ವಿಚಾರಣಾ ವರದಿ

ಉಪಸ್ಥಿತರು: **ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ ಶ್ರೀ. **ಆರ್ ನಾಗರಾಜು,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಡಿಗೇನಹಳ್ಳಿ ಗ್ರಾಮ ಪಂಚಾಯತ್ (ಪ್ರಸ್ತುತ ಹಂದಿಗುಂಟ ಗ್ರಾಮ ಪಂಚಾಯತ್), ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ/8064/2015/ಸನಿಕಾಸ–1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 16/05/2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/542/ಗ್ರಾಪಂಕಾ/2017, ಬೆಂಗಳೂರು, ದಿನಾಂಕ: 12/07/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ/947/2017, ಬೆಂಗಳೂರು ದಿನಾಂಕ: 18/08/2017.
4. Order No.UPLOK-1 & 2/DE/transfers/ 2018, Bengaluru, Dated 06/08/2018 file transferred from ARE-7 to ARE-14.

* * * * * *

ಈ ದೂರನ್ನು, ದೂರುದಾರರಾದ ಶ್ರೀ. **ಬಿ.ಎಸ್ ಹನುಮಂತರಾಯಪ್ಪ** ಬಿನ್ ಸಂಜೀವಪ್ಪ, ಕೊಡಿಗೇನಹಳ್ಳಿ ಗ್ರಾಮ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ ಶ್ರೀ. **ಆರ್ ನಾಗರಾಜು,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಡಿಗೇನಹಳ್ಳಿ ಗ್ರಾಮ ಪಂಚಾಯತ್ (ಪ್ರಸ್ತುತ ಹಂದಿಗುಂಟ ಗ್ರಾಮ ಪಂಚಾಯತ್), ಮಧುಗಿರಿ

ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ದೂರು ದಾಖಲಾಗಿದ್ದು, ತಮ್ಮ ದೂರಿನಲ್ಲಿ ತಮ್ಮ ಸ್ವತ್ತಿಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಸೌಲಭ್ಯ ಪಡೆದು ದಾಖಲೆಗಳನ್ನು ನೀಡುವಂತೆ ಆ.ಸ.ನೌ ರವರಿಗೆ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಆ.ಸ.ನೌ ರವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಗ್ರಾಮಕ್ಕೆ ಸಂಬಂಧಪಟ್ಟ ಕಸದ ರಾಶಿಯನ್ನು ಗ್ರಾಮಕ್ಕೆ ಸಮೀಪದಲ್ಲಿರುವ ಕೆರೆಯ ಬಳಿ ಹಾಕಿದ್ದು, ಇದರಿಂದ ಮಾಲೀನ್ಯ ಉಂಟಾಗಿರುತ್ತದೆ. ಸದರಿ ಗ್ರಾಮಕ್ಕೆ ಸಂಬಂಧಪಟ್ಟ ಬೀದಿ ದೀಪಗಳನ್ನು ಸರಿಯಾದ ರೀತಿ ನಿರ್ವಹಣೆ ಮಾಡಿರುವುದಿಲ್ಲ. ಸರ್ವೆ ನಂ.124/6ಎ ಹಾಗೂ 124/6ಬಿ ಜಮೀನಿನಲ್ಲಿ ಸರಿಯಾದ ರೀತಿ ಒಳಚರಂಡಿ ನಿರ್ವಹಿಸಿರುವುದಿಲ್ಲ. ಈ ಬಗ್ಗೆ 13ನೇ ಹಣಕಾಸಿನ ಯೋಜನೆಯಲ್ಲಿ ಕ್ರಿಯಾ ಯೋಜನೆ ರೂಪಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆದ್ದರಿಂದ ಇವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲು ಕೇಳಿಕೊಂಡಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 12/07/2017ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 18/08/2017 ರಂದು ಅಪರ ನಿಬಂಧಕರು, ವಿಚಾರಣೆಗಳು-7 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ ಶ್ರೀ. ಆರ್ ನಾಗರಾಜು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಡಿಗೇನಹಳ್ಳಿ ಗ್ರಾಮ ಪಂಚಾಯತ್ (ಪ್ರಸ್ತುತ ಹಂದಿಗುಂಟ ಗ್ರಾಮ ಪಂಚಾಯತ್), ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ದೋಷಾರೋಪಣೆ *(Articles of***

Charge) ಅನ್ನು ಅಪರ ನಿಬಂಧಕರು, ವಿಚಾರಣೆಗಳು-7 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 17/11/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ-1

ನೀವು, ಆ.ಸ.ನೌಕರರಾದ ಶ್ರೀ.ಮಂಜುನಾಥ ಎನ್. ನಾರಾಯಣಪುರ,

2. ಅ) **ಆ.ಸ.ನೌ.ರರಾದ ನೀವು ಕೊಡಿಗೇನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸಂಬಂಧಪಟ್ಟ ಘನ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸುವ ದೃಷ್ಟಿಯಿಂದ ಕ್ರಮ ಕೈಗೊಂಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಕರ್ತವ್ಯಲೋಪ ಎಸಗಿರುತ್ತೀರಿ.**

ಆ) **ಅದೇ ರೀತಿ ಆ.ಸ.ನೌ.ರರಾದ ನೀವು ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಕರ್ತವ್ಯಲೋಪ ಎಸಗಿರುತ್ತೀರಿ.**

ಇ) ಸದರಿ ಗ್ರಾಮಕ್ಕೆ ಸಂಬಂಧಪಟ್ಟಂತೆ ಸ.ನಂ.124/6ಎ ಮತ್ತು 124/6ಬಿ ಗಳ ನಡುವಿನ ಜಾಗದಲ್ಲಿ ಚರಂಡಿ ನಿರ್ಮಿಸಲು ಗ್ರಾಮ ಪಂಚಾಯತ್ ವತಿಯಿಂದ ಯಾವ ಕ್ರಮ ಕೈಗೊಳ್ಳಲಾಗಿದೆ? ಮತ್ತು ಸದರಿ ಕಾಮಗಾರಿಗೆ ಆ ಸ್ಥಳದ ಅಕ್ಕಪಕ್ಕದವರು ತಂಟೆ-ತಕರಾರು ಮಾಡಿದ ಸಂಬಂಧ ಪೋಲೀಸ್ ಸಹಕಾರದೊಂದಿಗೆ ಸದರಿ ಕಾಮಗಾರಿಯನ್ನು ಉದ್ಯೋಗ ಖಾತ್ರಿ ಯೋಜನೆಯಡಿ 2 ತಿಂಗಳೊಳಗಾಗಿ ನಿರ್ವಹಣೆ ಮಾಡುವ ಬಗ್ಗೆ ನಿಮಗೆ ನಿರ್ದೇಶನವಿದ್ದು, ಈ

ಬಗ್ಗೆ 2014–15ನೇ ಸಾಲಿನ 14ನೇ ಹಣಕಾಸು ಯೋಜನೆಯಲ್ಲಿ ಕ್ರಿಯಾ ಯೋಜನೆ ರೂಪಿಸಿ, ಅನುದಾನ ಬಿಡುಗಡೆಯಾಗಿದ್ದು, ಅಂದಾಜುಪಟ್ಟಿಯನ್ನು ತಯಾರಿಸಿದ್ದು, ಸದರಿ ಕಾಮಗಾರಿ ನಿರ್ವಹಣೆ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿರುತ್ತೀರಿ.

3. ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ–2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

4. ಶ್ರೀ. ಬಿ.ಎಸ್ ಹನುಮಂತರಾಯಪ್ಪ ಬಿನ್ ಸಂಜೀವಪ್ಪ, ಕೊಡಿಗೇನಹಳ್ಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಆರ್.ನಾಗರಾಜು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೊಡಿಗೇನಹಳ್ಳಿ ಗ್ರಾಮ ಪಂಚಾಯತ್ (ಪ್ರಸ್ತುತ ಹಂದಿಗುಂಟ ಗ್ರಾಮ ಪಂಚಾಯತ್), ಮಧುಗಿರಿ ತಾಲ್ಲೂಕು, ತುಮಕೂರು

ಜಿಲ್ಲೆ ರವರ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

5. ಪ್ರಕರಣದ ಸಂಕ್ಷಿಪ್ತ ಸಾರಾಂಶ:- ದೂರುದಾರರು ತಮ್ಮ ದೂರಿನಲ್ಲಿ ತಮ್ಮ ಸ್ವತ್ತಿಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಸೌಲಭ್ಯ ಪಡೆದು ದಾಖಲೆಗಳನ್ನು ನೀಡುವಂತೆ ಆ.ಸ.ನೌ.ರರಿಗೆ ಅರ್ಜಿ ಸಲ್ಲಿಸಿದ್ದು, ಆ.ಸ.ನೌ.ರರು ಯಾವುದೇ ಕ್ರಮ ಕೈಗೊಂಡಿಲ್ಲ, ಅಲ್ಲದೇ ಗ್ರಾಮಕ್ಕೆ ಸಂಬಂಧಪಟ್ಟ ಕಸದ ರಾಶಿಯನ್ನು ಗ್ರಾಮಕ್ಕೆ ಸಮೀಪದಲ್ಲಿರುವ ಕೆರೆಯ ಬಳಿ ಹಾಕಿದ ಪರಿಣಾಮ ಮಾಲಿನ್ಯ ಉಂಟಾಗಿದ್ದು, ಸದರಿ ಗ್ರಾಮಕ್ಕೆ ಸಂಬಂಧಪಟ್ಟ ಬೀದಿ ದೀಪಗಳನ್ನು ಸರಿಯಾದ ರೀತಿ ನಿರ್ವಹಣೆ ಮಾಡಿರುವುದಿಲ್ಲ. ಸ.ನಂ.124/6ಎ ಹಾಗೂ ಸ.ನಂ.124/6ಬಿ ಜಮೀನಿನಲ್ಲಿ ಸರಿಯಾದ ರೀತಿ ಒಳಚರಂಡಿ ನಿರ್ವಹಿಸಿರುವುದಿಲ್ಲ. ಈ ಬಗ್ಗೆ 13ನೇ ಹಣಕಾಸು ಯೋಜನೆಯಲ್ಲಿ ಕ್ರಿಯಾ ಯೋಜನೆ ರೂಪಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಆಪಾದಿಸಿದ್ದರು.

6. ದೂರಿನ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಧುಗಿರಿ ತಾಲ್ಲೂಕು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲಾಗುವುದು) ರವರಿಗೆ ಸೂಚಿಸಿದ್ದು, ಅದರಂತೆ ಸದರಿಯವರು ವರದಿ ಸಲ್ಲಿಸಿ, ದೂರುದಾರರ ಸ್ವತ್ತಿಗೆ ಸಂಬಂಧಪಟ್ಟಂತೆ ಇ-ಸ್ವತ್ತು ತಂತ್ರಾಂಶದಲ್ಲಿ ಖಾತೆ ಬದಲಾವಣೆ ಮಾಡಲಾಗಿದ್ದು, ಘನ ತ್ಯಾಜ್ಯ ವಸ್ತುಗಳನ್ನು ಹಾಕಲು ಗ್ರಾಮ ಪಂಚಾಯತ್‌ನಲ್ಲಿ ಪ್ರತ್ಯೇಕ ಸ್ಥಳ ಗುರುತಿಸಿದ್ದು, ಗ್ರಾಮದಲ್ಲಿ ಸಂಗ್ರಹವಾಗುವ ಎಲ್ಲಾ ಘನ ತ್ಯಾಜ್ಯ ವಸ್ತುಗಳನ್ನು ಗುರುತಿಸುವ ಸ್ಥಳದಲ್ಲಿ ಗುಂಡಿಗಳನ್ನು ತೆಗೆದು ಹಾಕುವಂತೆ ಆ.ಸ.ನೌ.ರರಿಗೆ ತಿಳಿಸಿದ ಮೇರೆಗೆ ಕ್ರಮ ಕೈಗೊಂಡಿದ್ದು, ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸುವ ಸಂಬಂಧ ಸ್ವಿಚ್‌ಗಳನ್ನು ಅಳವಡಿಸುವಂತೆ

ಚೆಸ್ಕಾಂ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು, ಸ.ನಂ.124/6ಎ ಮತ್ತು ಸ.ನಂ.124/6ಬಿ ಗಳ ನಡುವಿನ ಜಾಗದಲ್ಲಿ ಚರಂಡಿ ನಿರ್ಮಿಸಲು ಕಾಮಗಾರಿ ಪ್ರಾರಂಭಿಸಿದ್ದು, ಸದರಿ ಕಾಮಗಾರಿ ಸ್ಥಳದ ಬಗ್ಗೆ ಅಕ್ಕಪಕ್ಕದವರಲ್ಲಿ ತಕರಾರಿದ್ದ ಪ್ರಯುಕ್ತ ಕಾಮಗಾರಿ ಸ್ಥಗಿತಗೊಂಡಿದ್ದು, ಈ ಬಗ್ಗೆ ಪೊಲೀಸ್ ಸಹಕಾರದೊಂದಿಗೆ ಬಗೆಹರಿಸಿ, 2 ತಿಂಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಚರಂಡಿ ನಿರ್ಮಿಸಿ ವರದಿ ಸಲ್ಲಿಸುವಂತೆ ಆ.ಸ.ನೌ.ರರಿಗೆ ತಿಳಿಸಿದ ಬಗ್ಗೆ ವರದಿಯಲ್ಲಿ ನಮೂದು ಮಾಡಿದ್ದರು.

7. ದೂರು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಆ.ಸ.ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠತೆಯನ್ನು ತೋರಿಸದೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾದ್ದರಿಂದ ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕ್ರಮ ಜರುಗಿಸಬಹುದಾಗಿದೆ ಎಂದು ಕಂಡುಬಂದಿರುತ್ತದೆ.

8. ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಆ.ಸ.ನೌಕರರಾದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದೀರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಆ.ಸ.ನೌಕರರಾದ ನಿಮ್ಮ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ

ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಹಿಸಿ ಆದೇಶ ಮಾಡಿದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 23/12/2017 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

7. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ತಾನು ಕೊಡಿಗೇನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಿಯಮಾನುಸಾರ 14ನೇ ಹಣಕಾಸು ಯೋಜನೆಗೆ ಗ್ರಾಮ ಸಭೆ ಮತ್ತು ಸಾಮಾನ್ಯ ಸಭೆಯಲ್ಲಿ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿಗಧಿಪಡಿಸಿದ ಆರ್ಥಿಕ ಮತ್ತು ಭೌತಿಕ ಗುರಿಯಂತೆ ಕ್ರಿಯಾ ಯೋಜನೆಯನ್ನು ತಯಾರಿಸಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ಮುಂದುವರೆದು, ಮೇಲ್ಕಂಡ ವಿವಾದಿತ ಚರಂಡಿ ನಿರ್ಮಾಣದ ಬಗ್ಗೆ

ಗ್ರಾಮಸ್ಥರು ಅಡ್ಡಿಪಡಿಸಿರುವುದರಿಂದ ಕಾಮಗಾರಿ ಸ್ಥಗಿತಗೊಂಡಿರುತ್ತದೆ. ಈ ವಿಷಯದಲ್ಲಿ ತನಗೆ 2 ತಿಂಗಲ ಕಾಲಾವಕಾಶ ಕಲ್ಪಿಸಿ ಚರಂಡಿ ನಿರ್ಮಾಣದ ಕಾಮಗಾರಿಯನ್ನು ಪೂರ್ಣಗೊಳಿಸಲು ನಿರ್ದೇಶಿರುವಂತೆ ನರೇಗಾ ಯೋಜನೆಯಲ್ಲಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿರುತ್ತೇನೆ ಅಂತಾ ಹೇಳಿರುತ್ತಾರೆ. ಈ ಬಗ್ಗೆ ನಿಯಮಾನುಸಾರ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಸದಸ್ಯರು ಪರಿಶೀಲಿಸಿ ತನಗೆ ಸೂಕ್ತ ಕ್ರಮ ಕೈಗೊಳ್ಳಲು ಸಹಕಾರ ನೀಡಲು ಕೋರಿದ್ದು, ರಾಜಕೀಯ ಪ್ರೇರಿತ ಪ್ರಭಾವದಿಂದ ಗ್ರಾಮ ಪಂಚಾಯಿತಿಯ ಆಡಳಿತ ಮಂಡಳಿಯವರು ಸೂಕ್ತ ಸಹಕಾರ ನೀಡದೇ ಅನುಷ್ಠಾನ ಕುಂಠಿತಗೊಂಡಿರುತ್ತದೆ.

8. ತದನಂತರ, ಪೋಲಿಸ್ ಇಲಾಖೆಯ ಸಹಾಯದಿಂದ ಘನತಾಜ್ಯ ಗುಂಡಿಗಳನ್ನು ತೆರವುಗೊಳಿಸಿ ಚರಂಡಿ ಕಾಮಗಾರಿಯನ್ನು ಮೇಲಾಧಿಕಾರಿಗಳ ಸೂಚನೆ ಮತ್ತು ಸಲಹೆ ಹಾಗೂ ಸಹಕಾರದೊಂದಿಗೆ ಅನುಷ್ಠಾನಗೊಳಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ಸದರಿ ಪ್ರಕರಣದ ಬಗ್ಗೆ ತನ್ನ ವರದಿಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಿದ್ದು, ಒತ್ತುವರಿವನ್ನು ತೆರವುಗೊಳಿಸುವ ಹೊಣೆಗಾರಿಕೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸರ್ಕಾರಿ ಆದೇಶ 2011 ಮತ್ತು 2013 ರಂತೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವಹಿಸಲಾಗಿರುತ್ತದೆ. ಆದಕಾರಣ, ಈ ಹೊಣೆಗಾರಿಕೆಗೆ ತನಿಖಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಪೂರ್ಣ ಹೊಣೆಗಾರರಾಗಿರುತ್ತಾರೆ. ಸರ್ಕಾರಿ ಸುತ್ತೋಲೆ ದಿನಾಂಕ: 08/02/2008 ರ ನಿರ್ದೇಶನದಂತೆ ನರೇಗಾ ಯೋಜನೆ ಅನುಷ್ಠಾನದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯಕ್ರಮ ಅಧಿಕಾರಿಗಳು ಶೇ.100% ಪ್ರಮಾಣದ ಕಾಮಗಾರಿಯನ್ನು ಪರಿಶೀಲಿಸಿ ಎಂ.ಐ.ಎಸ್ ದಾಖಲೆಗಳನ್ನು ಅಂತರ್ಜಾಲದಲ್ಲಿ ಪರಿಶೀಲಿಸಿ ನಿಯಮಾನುಸಾರ ಅನುದಾನ ಬಿಡುಗಡೆ ಮಾಡಲು ಹೊಣೆಗಾರರಾಗಿರುತ್ತಾರೆ. ಇದರಂತೆ ಶೇ.10% ಮತ್ತು 2% ಕಾಮಗಾರಿಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಜಿಲ್ಲಾ ಸಮನ್ವಯ ಅಧಿಕಾರಿಗಳು ಹಾಗೂ ಸರ್ಕಾರದ ನಿಯಮಾನುಸಾರ ಪರಿಶೀಲಿಸಿ ಸೂಕ್ತ ನಿರ್ದೇಶನ ನೀಡಲು ಸುತ್ತೋಲೆಯಲ್ಲಿ ಸೂಚಿಸಿರುತ್ತಾರೆ.

9. ದೂರುದಾರರು ಗ್ರಾಮ ಪಂಚಾಯತಿಯಲ್ಲಿ ಬೀದಿ ದೀಪ, ನೀರು ಸರಬರಾಜು, ಘನತಾಜ್ಯ ವಸ್ತುಗಳ ಹಾಗೂ ಸಾದಿಲ್ವಾರು ವೆಚ್ಚ ಮತ್ತು ಮಾಲೀನ್ಯ ಉಂಟಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ತನ್ನ ವಿರುದ್ಧ ಇವರ ಇಲಾಖೆಯಲ್ಲಿ ದೂರು ದಾಖಲಿಸಿರುವ ಬಗ್ಗೆ ಗ್ರಾಮ ಪಂಚಾಯಿತಿಯ ಆಡಳಿತ ಮಂಡಳಿರವರಲ್ಲಿ ವಿಚಾರಣೆ ಮಾಡದೇ ಹಾಗೂ ಸಾಮಾನ್ಯ ಸಭೆಗಳಲ್ಲಿ ತೆಗೆದುಕೊಂಡ ತೀರ್ಮಾನ ಹಾಗೂ ಠರಾವುಗಳನ್ನು ವಿಚಾರ ಮಾಡದೇ ಜಂಟಿ ನಿರ್ವಹಣೆ ಬಗ್ಗೆ ಪರಿಶೀಲಿಸದೇ ನೇರವಾಗಿ ತನ್ನ ವಿರುದ್ಧ ದೂರು ಅರ್ಜಿಯನ್ನು ಸಲ್ಲಿಸಿರುವುದು ನಿಯಮಬಾಹಿರವಾಗಿರುತ್ತದೆ. ಆದ್ದರಿಂದ, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

10. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು ರವರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 14 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಶ್ರೀ. ಆನಂದಕುಮಾರ ಜಿ ಇವರನ್ನು ಪಿ.ಡಬ್ಲೂ.2 ಎಂದು ಸಾಕ್ಷ್ಯ ನುಡಿಸಿಕೊಂಡಿದ್ದು, ಶ್ರೀ. ದೊಡ್ಡಸಿದ್ದಯ್ಯ ರವರನ್ನು ಪಿ.ಡಬ್ಲ್ಯೂ.3 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.15ನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ತಮ್ಮ ಸಾಕ್ಷ್ಯ ನುಡಿಸಿಕೊಂಡು, ನಿ.ಡಿ.1 ರಿಂದ 10 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

11. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು.

12. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ-1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ-2:** ಆದೇಶವೇನು?

13. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

14. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ನಕಾರಾತ್ಮಕವಾಗಿ**
**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

15. ಈ ಪ್ರಕರಣದಲ್ಲಿ ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ **ಶ್ರೀ. ಬಿ.ಎಸ್ ಹನುಮಂತರಾಯಪ್ಪ** ಬಿನ್ ಸಂಜೀವಪ್ಪ, ಕೊಡಿಗೇನಹಳ್ಳಿ ಗ್ರಾಮ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ರವರ ಸಾಕ್ಷ್ಯ ಮಾಡಿಸಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತನ್ನ ಹೆಂಡತಿ ಮಾಲತಿ ರಾಯಪ್ಪ ಇವರ ಹೆಸರಿನಲ್ಲಿದ್ದ ಆಸ್ತಿಯನ್ನು ಮಾಲತಿ ರಾಮಪ್ಪ ಎಂದು ಹಿಂದಿನ ಪಿ.ಡಿ.ಓ ನಕಲಿ ಮಾಡಿದ್ದು ಈ ಬಗ್ಗೆ ಮೇಲಾಧಿಕಾರಿಗಳಿಗೆ ದೂರನ್ನು ಸಲ್ಲಿಸಿದ್ದು, ಇದರ ಬಗ್ಗೆ ತಪ್ಪನ್ನು ಸರಿಪಡಿಸಬೇಕೆಂದು ಆ.ಸ.ನೌ ರವರಿಗೆ ಹಾಗೂ ಹಿಂದಿನ ಪಿ.ಡಿ.ಓ ರವರಿಗೆ ತಿಳಿಸಿದರು, ಹಿಂದಿನ ಪಿ.ಡಿ.ಓ ರವರು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಆ.ಸ.ನೌ ರವರು ಅದನ್ನು ಸರಿಪಡಿಸಲು ತಮ್ಮಲ್ಲಿ ದಾಖಲಾತಿಯನ್ನು ಕೊಟ್ಟಿರುವುದಿಲ್ಲ ಎಂದು ಹೇಳಿದ್ದರಿಂದ, ನಂತರ ಎಲ್ಲಾ ದಾಖಲಾತಿಗಳನ್ನು ಪುನಃ ಸಲ್ಲಿಸಿದಾಗ ನಂತರ ಸರಿಪಡಿಸಿಕೊಟ್ಟರು ಅಂತಾ ನುಡಿದಿರುತ್ತಾರೆ. ಆದರೆ, ಸುಮಾರು 9 ತಿಂಗಳುಗಳ ಕಾಲ ತಡವಾಗಿ ಕೊಟ್ಟಿದ್ದರಿಂದ ತನ್ನ ಮಗಳ ವಿದ್ಯಾಭ್ಯಾಸದ ಬಗ್ಗೆ ಸಾಲವನ್ನು ಪಡೆಯಲು ತೊಂದರೆಯಾಗಿರುತ್ತದೆ ಅಂತಾ ನುಡಿದಿರುತ್ತಾರೆ. ತಮ್ಮ ಪರವಾಗಿ ನಿ.ಪಿ.1 ರಿಂದ ನಿ.ಪಿ.14 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ.1 ದೂರು, ನಿ.ಪಿ.2 ಮತ್ತು ನಿ.ಪಿ.3 ಫಾರಂ ನಂ.1 ಮತ್ತು 2 ಎಂದು, ದಿನಾಂಕ: 04/03/2014 ರಂದು ಗ್ರಾಮ ಪಂಚಾಯಿತಿಗೆ ಸಲ್ಲಿಸಿದ ಅರ್ಜಿಯನ್ನು ನಿ.ಪಿ.4 ಎಂದು, ದಿನಾಂಕ: 15/03/2014 ರಂದು

ಕೊಡಿಗೇನಹಳ್ಳಿ ಕಛೇರಿಯಿಂದ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಮಧುಗಿರಿ ಇವರಿಗೆ ಬರೆದ ಪತ್ರ ನಿ.ಪಿ.5 ಎಂದು, ದೂರುದಾರರ ಹೆಂಡತಿ ದಿನಾಂಕ: 02/04/2014 ರಂದು ಆ.ಸ.ನೌ ರವರಿಗೆ ಸಲ್ಲಿಸಿದ ಅರ್ಜಿ ನಿ.ಪಿ.6 ಎಂದು, ದಿನಾಂಕ: 24/05/2014 ರಂದು ಪಿ.ಡಿ.ಓ ಗ್ರಾಮ ಪಂಚಾಯಿತಿ ಇವರು ನೀಡಿರುವ ಹಿಂಬರಹ ನಿ.ಪಿ.7 ಎಂದು, ದಿನಾಂಕ: 06/05/2014 ರಂದು ದೂರುದಾರರ ಹೆಂಡತಿ ಜಿಲ್ಲಾ ಪಂಚಾಯಿತಿಗೆ ಬರೆದ ಅರ್ಜಿಯನ್ನು ನಿ.ಪಿ.8 ಎಂದು, ಅದರಂತೆ ದೂರುದಾರರ ಹೆಂಡತಿ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಬರೆದ ಅರ್ಜಿಯನ್ನು ನಿ.ಪಿ.9 ಎಂದು, ಅದರಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮಧುಗಿರಿ ರವರಿಗೆ ಬರೆದು ಅರ್ಜಿಯನ್ನು ನಿ.ಪಿ.10 ಎಂದು, ಜಿಲ್ಲಾಧಿಕಾರಿಗಳಿಗೆ ಬರೆದ ಅಜಿಯನ್ನು ನಿ.ಪಿ.11 ಎಂದು, ದೂರುದಾರರು ಸಲ್ಲಿಸಿದ ಪ್ರತ್ಯುತ್ತರ ನಿ.ಪಿ.12 ಎಂದು ಮತ್ತು ಅದರ ಮೇಲೆ ಇವರ ಸಹಿಯನ್ನು ನಿ.ಪಿ.13 ಎಂದು, ಪ್ರತ್ಯುತ್ತರದೊಂದಿಗೆ ಮಾಹಿತಿ ಹಕ್ಕಿನಲ್ಲಿ ಪಡೆದಂತಹ ದಾಖಲಾತಿಗಳನ್ನು ನಿ.ಪಿ.14 ಎಂದು ಗುರುತಿಸಿಕೊಳ್ಳಲಾಗಿದೆ.

16. ಈ ವಿಚಾರಣೆಯಲ್ಲಿ ಶ್ರೀ. ಮಹಾಲಿಂಗಪ್ಪ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮಧುಗಿರಿ ಇವರನ್ನು ತನಿಖಾಧಿಕಾರಿಗಳೆಂದು ನೇಮಿಸಿದ್ದು, ಇವರು ತನಿಖೆಯನ್ನು ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ. ಈ ವಿಚಾರಣೆಯಲ್ಲಿ ತನಿಖಾಧಿಕಾರಿಗಳಾದ ಶ್ರೀ. ಮಹಾಲಿಂಗಪ್ಪ ನವರು ಮೃತಪಟ್ಟಿದ್ದರಿಂದ ಅವರು ಸಲ್ಲಿಸಿದ ವರದಿ ಮತ್ತು ಸಹಿಯನ್ನು ಗುರುತಿಸಲು ಶ್ರೀ. ಆನಂದ್‌ಕುಮಾರ್ ರವರನ್ನು ಪಿ.ಡಬ್ಲ್ಯೂ.2 ಸಾಕ್ಷಿ ನುಡಿಯಲು ಕರೆಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಶ್ರೀ. ಮಹಾಲಿಂಗಪ್ಪ ನವರ ಸಹಿಯನ್ನು ಗುರುತಿಸಲು ಆಗಿರುವುದಿಲ್ಲ ಅಂತಾ ನುಡಿದಿರುತ್ತಾರೆ. ನಂತರ ಸದರಿ ವರದಿಯ ಮೇಲೆ ಇದ್ದ ಸಹಿಯನ್ನು ಗುರುತಿಸುವ ಸಲುವಾಗಿ, ಪಿ.ಡಬ್ಲ್ಯೂ.3 ಇವರ ಸಾಕ್ಷಿಯನ್ನು ಮಾಡಿಸಿದ್ದು ಅವರು ಶ್ರೀ. ಮಹಾಲಿಂಗಪ್ಪ ನವರ ಸಹಿಯನ್ನು ಗುರುತಿಸಿದ್ದು, ಅವರು ಸಲ್ಲಿಸಿದ ವರದಿಯನ್ನು ನಿ.ಪಿ.15 ಮತ್ತು ಮಹಾಲಿಂಗಪ್ಪ ನವರ ಸಹಿಯನ್ನು ನಿ.ಪಿ.15(ಎ) ಎಂದು ಗುರುತಿಸಲಾಗಿರುತ್ತದೆ. ಸದರಿ ವರದಿಯು ದಿನಾಂಕ: 20/07/2015 ರಲ್ಲಿ ಮಹಾಲಿಂಗಪ್ಪ ನವರು ಸಲ್ಲಿಸಿದ್ದು ಅದರಲ್ಲಿ ಮೇಲೆ

ಹೇಳಿದ ವಿಷಯದ ಬಗ್ಗೆ ತಮ್ಮ ವರದಿ ಅಂಶ ನಂ.1ರಲ್ಲಿ ಹೇಳಿದ್ದು, ಅದರಲ್ಲಿ "ಈ ಸ್ವತ್ತು ತತ್ರಾಂಶದಲ್ಲಿ ಖಾತೆ ಮಾಡಲು ಕೋರಿದ್ದು, ಅದರಂತೆ ಖಾತೆ ಮಾಡಿಕೊಡಲಾಗಿದೆ ಎಂದು ಹೇಳಿರುತ್ತಾರೆ". ಆದ್ದರಿಂದ, ದೋಷಾರೋಪಣೆಯಲ್ಲಿ ಈ ವಿಷಯದ ಬಗ್ಗೆ ಯಾವುದೇ ಆಪಾದನೆಗಳು ಇರುವುದಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ದೂರುದಾರರು ನಿ.ಪಿ.4 ರಿಂದ ನಿ.ಪಿ.11 ರವರೆಗಿನ ದಾಖಲಾತಿಯನ್ನು ಗುರುತಿಸಿಕೊಂಡಿರುತ್ತಾರೆ. ಆದರೆ, ಮೇಲೆ ಹೇಳಿದ ಹಾಗೆ ದೋಷಾರೋಪಣೆ ಅನುಬಂಧ–1ರಲ್ಲಿ ಈ ವಿಷಯದ ಬಗ್ಗೆ ದೋಷಾರೋಪಣೆ ಇರುವುದಿಲ್ಲ. ಆದ್ದರಿಂದ, ಈ ವಿಷಯದ ಬಗ್ಗೆ ಹೆಚ್ಚಿಗೆ ಚರ್ಚಿಸುವ ಅವಶ್ಯಕತೆ ಇರುವುದಿಲ್ಲ. ಇದರ ಹೊರತಾಗಿ ದೂರುದಾರರು ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಹಿಂದಿನ ಪಿ.ಡಿ.ಓಗಳಾದ ಶ್ರೀ. ಹೆಚ್.ವಿ ಶಿವರುದ್ರಪ್ಪ ಇವರ ವಿರುದ್ಧ ಈ ಸಂಸ್ಥೆಗೆ ಇನ್ನೊಂದು ದೂರು ನಂ.ಉಪಲೋಕ್/ಬಿಡಿ/6916/2014ನ್ನು ದಾಖಲು ಮಾಡಿರುತ್ತಾರೆ. ಅದೇ ವಿಷಯಕ್ಕೆ ಸಂಬಂಧಪಟ್ಟಂತೆ ಶ್ರೀ. ಹೆಚ್.ವಿ ಶಿವರುದ್ರಪ್ಪ ರವರು ವರ್ಗಾವಣೆಗೊಂಡ ನಂತರ ಇವರ ವಿರುದ್ಧ ಈ ದೂರನ್ನು ಸಲ್ಲಿಸಿರುತ್ತಾರೆ. ಈಗಾಗಲೇ ಮೇಲೆ ಹೇಳಿದಂತೆ ಸದರಿ ವಿಷಯದ ಬಗ್ಗೆ ನಿ.ಪಿ.15ರ ಪ್ರಕಾರ ಕ್ರಮ ತೆಗೆದುಕೊಂಡಿದ್ದರಿಂದ ಶಿಸ್ತು ಪ್ರಾಧಿಕಾರವು ಈ ವಿಷಯದ ಬಗ್ಗೆ ರುಜುವಾತುಪಡಿಸಿರುವುದಿಲ್ಲ.

17. ಆ.ಸ.ನೌ ರವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಇವರು ಸಾಕ್ಷಿ ರೂಪದಲ್ಲಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿದ ವಿಷಯವನ್ನೇ ಹೇಳಿರುತ್ತಾರೆ. ತಮ್ಮ ಪರವಾಗಿ ನಿ.ಡಿ.1 ರಿಂದ ನಿ.ಡಿ.14 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಡಿ.1 ಇದು ಅಧ್ಯಕ್ಷರು, ಗ್ರಾಮ ಪಂಚಾಯಿತಿ; ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಮಧುಗಿರಿ ರವರಿಗೆ ದೂರುದಾರರು ಸಲ್ಲಿಸಿದ ದೂರಿನ ವಿಷಯದ ಬಗ್ಗೆ ಪತ್ರವನ್ನು ಬರೆದುಕೊಂಡ ಬಗ್ಗೆ ದಾಖಲಾತಿ ಇರುತ್ತದೆ. ನಿ.ಡಿ.2 ಇದು ದಿನಾಂಕ: 28/03/2014ರ ಕಛೇರಿ ಟಿಪ್ಪಣಿ ಇರುತ್ತದೆ. ನಿ.ಡಿ.3 ಇದು ಆ.ಸ.ನೌ ರವರು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಮಧುಗಿರಿ ರವರಿಗೆ ದಿನಾಂಕ: 17/07/2015 ರಂದು ಸಲ್ಲಿಸಿದ ವರದಿ. ನಿ.ಡಿ.4 ಇದು ಗ್ರಾಮ ಪಂಚಾಯಿತಿಯಲ್ಲಿನ ಬೇಡಿಕೆ

ವಹಿಯ ಸಂಖ್ಯೆ: 605/1360 ಈ ಸ್ವತ್ತಿನ ದಾಖಲಾತಿಗಳು ಇರುತ್ತದೆ. ನಿ.ಡಿ.5 ಇದು ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶದಂತೆ ಘನತಾಜ್ಯಕ್ಕೆ ಸಂಬಂಧಪಟ್ಟಂತೆ ಹಾಜರುಪಡಿಸಿದ ಛಾಯಾಚಿತ್ರಗಳಾಗಿರುತ್ತದೆ. ನಿ.ಡಿ.6 ಇದು ಆ.ಸ.ನೌ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಇವರಿಗೆ ಬೀದಿ ದೀಪಗಳಿಗೆ ಸಂಬಂಧಪಟ್ಟಂತೆ ಬರೆದುಕೊಂಡ ಪತ್ರ. ನಿ.ಡಿ.7 ಇದು ಆ.ಸ.ನೌ ರವರು ಉಪವಿಭಾಗಾಧಿಕಾರಿಗಳು, ಮಧುಗಿರಿ ಉಪ ವಿಭಾಗ, ಮಧುಗಿರಿ ಇವರಿಗೆ ಸರ್ವೆ ನಂ.124/6ಎ ಮತ್ತು 124/6ಬಿ ರಲ್ಲಿರುವ ರಸ್ತೆಯನ್ನು ಗುರುತಿಸಿ ಹದ್ದುಬಸ್ತು ಮಾಡಿಕೊಡುವ ಬಗ್ಗೆ. ನಿ.ಡಿ.8 ಇದು ಮೇಲಿನ ಸರ್ವೆ ನಂಬರ್‌ಗಳಿಗೆ ಭೇಟಿ ನೀಡಿದ ಬಗ್ಗೆ ಛಾಯಾಚಿತ್ರಗಳು. ನಿ.ಡಿ.9 ಮತ್ತು ನಿ.ಡಿ.10 ಸರ್ಕಾರದ ಸುತ್ತೋಲೆಗಳಾಗಿರುತ್ತದೆ. ಶಿಸ್ತು ಪ್ರಾಧಿಕಾರವು ಇವರ ಪಾಟಿಸವಾಲಿನಲ್ಲಿ ಎಲ್ಲಾ ದಾಖಲಾತಿಗಳು ಈ ಪ್ರಕರಣಕ್ಕೆ ಅನುಕೂಲವಾಗಲೆಂದು ಹಾಜರುಪಡಿಸಿರುತ್ತೇನೆ ಅಂತಾ ಸಲಹೆ ನೀಡಿದ್ದು, ಅದಕ್ಕೆ ಆ.ಸ.ನೌ ರವರು ಅಲ್ಲಗಳೆದಿರುತ್ತಾರೆ ಮತ್ತು ಆ.ಸ.ನೌ ರವರು ಯಾವುದೇ ಕಾಮಗಾರಿಗಳನ್ನು ಸರಿಯಾಗಿ ನಿರ್ವಹಿಸಿದೇ ಕರ್ತವ್ಯ ಲೋಪ ಎಸಗಿರುತ್ತಾರೆ ಎಂದು ಮಾಡಿದ ಸಲಹೆಗೆ ಆ.ಸ.ನೌ ರವರು ಅಲ್ಲಗಳೆದಿರುತ್ತಾರೆ.

18. ದೋಷಾರೋಪಣೆ ಅನುಬಂಧ-1ರಲ್ಲಿ 2(ಅ) ಪ್ರಕಾರ ಆಸನೌರವರು ಗ್ರಾಮಪಂಚಾಯತಿ ವ್ಯಾಪ್ತಿಗೆ ಸಂಬಂಧಪಟ್ಟ ಘನತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸುವ ದೃಷ್ಟಿಯಿಂದ ಕ್ರಮಕೈಗೊಂಡಿರುವ ಬಗ್ಗೆ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಅಂತಾ ಇರುತ್ತದೆ. ದೂರುದಾರರ ಪ್ರಕಾರ ಘನತ್ಯಾಜ್ಯವನ್ನು ಚಿಕ್ಕಕೆರೆಯಲ್ಲಿ ಸುರಿಯುತ್ತಿದ್ದು ಸರ್ಕಾರದ ಅನುಧಾನದಲ್ಲಿ ನಿರ್ಮಿಸಿರುವ ತ್ಯಾಜ್ಯ ಘಟಕದಲ್ಲಿ ವಿಲೇ ಮಾಡುತ್ತಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆದರೆ ತನ್ನ ಮುಖ್ಯ ವಿಚಾರಣೆಯಲ್ಲಿ ಈ ವಿಷಯದ ಬಗ್ಗೆ ಸಾಕ್ಷಿಯು ನುಡಿದಿರುವುದಿಲ್ಲ. ಈ ಪ್ರಕರಣದಲ್ಲಿ ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ಮಧುಗಿರಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು (ತನಿಖಾಧಿಕಾರಗಳು) ರವರನ್ನು ನೇಮಿಸಿದ್ದು ಅವರು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯು ನಿ.ಪಿ.15ಅಂತಾ ಗುರುತಿಸಲಾಗಿದ್ದು ಅವರು ವರದಿಯಲ್ಲಿ ಈ ವಿಷಯದ ಬಗ್ಗೆ "ಘನತ್ಯಾಜ್ಯ ವಸ್ತುಗಳನ್ನು ಹಾಕಲು ಗ್ರಾಮಪಂಚಾಯತಿಯಲ್ಲಿ

ಪ್ರತ್ಯೇಕ ಸ್ಥಳ ಗುರುತಿಸಿದ್ದು, ಗ್ರಾಮದಲ್ಲಿ ಸಂಗ್ರಹವಾಗುವ ಎಲ್ಲಾ ಘನತ್ಯಾಜ್ಯ ವಸ್ತುಗಳನ್ನು ಗುರುತಿಸಿರುವ ಸ್ಥಳದಲ್ಲಿ ಗುಂಡಿಗಳನ್ನು ತೆಗೆದುಹಾಕುವಂತೆ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಅದರಂತೆ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿ ಕ್ರಮವಹಿಸಿರುವುದಾಗಿ ಛಾಯಾಚಿತ್ರಗಳೊಂದಿಗೆ ವರದಿಯನ್ನು ಸಲ್ಲಿಸಿರುತ್ತಾರೆ" ಅಂತಾ ಹೇಳಿರುತ್ತಾರೆ. ಆಸನೌರವರು ತಮ್ಮ ವರದಿಯನ್ನು ನಿ.ಡಿ.3 ಎಂದು ಗುರುತಿಸಿಕೊಂಡಿದ್ದು ಅದರಲ್ಲಿ ಘನತ್ಯಾಜ್ಯ ವಸ್ತುಗಳನ್ನು ಹಾಕಲು ಗ್ರಾಮಪಂಚಾಯತಿಯಲ್ಲಿ ಪ್ರತ್ಯೇಕ ಸ್ಥಳ ಗುರುತಿಸಿ ಸಂಗ್ರಹವಾಗುವ ಎಲ್ಲಾ ಘನತ್ಯಾಜ್ಯ ವಸ್ತುಗಳನ್ನು ಗುರುತಿಸುವ ಸ್ಥಳದಲ್ಲಿ 10x10ಅಡಿಯ 2ಗುಂಡಿಗಳನ್ನು ತೆಗೆಸಲಾಗಿದ್ದು ಇದಕ್ಕೆ ಸಂಬಂಧಪಟ್ಟಂತೆ ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಡಿ.5 ಅಂತಾ ಗುರುತಿಸಲಾಗಿದೆ. ನಿ.ಡಿ.5ನ್ನು ಪರಿಶೀಲಿಸಿದಾಗ ಅಲ್ಲಿ ಗುಂಡಿಗಳನ್ನು ತೆಗೆಸಿದ್ದು ಕಂಡುಬರುತ್ತದೆ. ಕಾರಣ ನನ್ನ ಅಭಿಪ್ರಾಯದಲ್ಲಿ ಈ ಅಂಶವನ್ನು ಶಿಸ್ತು ಪ್ರಾಧಿಕಾರವು ರುಜುವಾತುಪಡಿಸಿರುವುದಿಲ್ಲ.

19. ದೋಷಾರೋಪಣೆ ಅನುಬಂಧ-1ರಲ್ಲಿ 2(ಆ) ಪ್ರಕಾರ ಆಸನೌರವರು ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ಇರುತ್ತದೆ. ಪಿ.ಡಬ್ಲ್ಯೂ-1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದಿಲ್ಲ ಅಂತಾ ಹೇಳಿರುತ್ತಾರೆ. ನಿ.ಪಿ.1ರಲ್ಲಿ ಅಂದರೆ ತಮ್ಮ ದೂರಿನಲ್ಲಿ ಸದರಿ ಬೀದಿ ದೀಪಗಳು ಯಾವುದೇ ನಿಯಂತ್ರಣವಿಲ್ಲದೆ ಹಗಲು ರಾತ್ರಿ ಉರಿಯುತ್ತಿದ್ದರಿಂದ ಅವುಗಳಿಗೆ ನಿಯಂತ್ರಕಗಳನ್ನು ಅಳವಡಿಸಿರುವುದಿಲ್ಲ ಅಂತಾ ಹೇಳಿರುತ್ತಾರೆ. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ "ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದ್ದು, ಕೇಂದ್ರಿತ ನಿಯಂತ್ರಣದ ಸ್ವಿಚ್‌ಗಳನ್ನು ಅಳವಡಿಸುವಂತೆ ಬೆಸ್ಕಾಂರವರಿಗೆ ಕೋರಿ ಪತ್ರ ಬರೆಯಲು ಸೂಚಿಸಲಾಗಿದ್ದು ಅಂತಾ ನಮೂದು ಇರುತ್ತದೆ" ಅದರಂತೆ ಆ.ಸ.ನೌ ರವರು ಪತ್ರ ಬರೆಯಲಾಗಿದೆ ಅಂತಾ ತಿಳಿಸಿರುತ್ತಾರೆ. ಆಸನೌರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಇವರಿಗೆ ಪತ್ರ ಬರೆದಿರುತ್ತೇನೆ ಅಂತಾ ಹೇಳಿದ್ದು ಆ

ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ.6ಎಂದು ಗುರುತಿಸಲಾಗಿದೆ. ಅದನ್ನು ಪರಿಶೀಲಿಸಿದಾಗ ಬೀದಿ ದೀಪಗಳು ಹಗಲು ಹೊತ್ತಿನಲ್ಲಿ ಉರಿಯುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿದ್ದರಿಂದ, ತಾವುಗಳು ಪರಿಶೀಲಿಸಿ ಕೆಲವುಕಡೆ 2ಫೇಸ್ ಇದ್ದು 3ಫೇಸ್ ಅಳವಡಿಸಿಕೊಟ್ಟು ಸರಿಪಡಿಸಬೇಕಾಗಿ ಕೇಳಿಕೊಂಡಿರುತ್ತಾರೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಆಸನೌಗವರು ಈ ಬಗ್ಗೆಯೂ ಕ್ರಮ ತೆಗೆದುಕೊಂಡಿದ್ದರಿಂದ ಈ ಅಂಶವನ್ನೂ ಸಹಾ ಶಿಸ್ತು ಪ್ರಾಧಿಕಾರವು ರುಜುವಾತುಪಡಿಸಿರುವುದಿಲ್ಲ.

20.ದೋಷಾರೋಪಣೆ ಅನುಬಂಧ-1ರಲ್ಲಿ 2(ಇ) ಪ್ರಕಾರ ಸರ್ವೇ ನಂ.124/6ಎ ಮತ್ತು 124/6ಬಿಗಳ ನಡುವಿನ ಜಾಗದಲ್ಲಿ ಚರಂಡಿ ನಿರ್ಮಿಸಲು ಗ್ರಾಮಪಂಚಾಯತಿ ವತಿಯಿಂದ ಯಾವ ಕ್ರಮ ಕೈಗೊಳ್ಳಲಾಗಿದೆ ಮತ್ತು ಸದರಿ ಕಾಮಗಾರಿಗೆ ಆ ಸ್ಥಳದ ಅಕ್ಕಪಕ್ಕದವರು ತಂಟೆತಕರಾರು ಮಾಡಿದ ಸಂಬಂಧ ಪೊಲೀಸ್ ಸಹಕಾರದೊಂದಿಗೆ ಸದರಿ ಕಾಮಗಾರಿಯನ್ನು ಉದ್ಯೋಗಖಾತ್ರಿ ಯೋಜನೆಯಡಿ 2 ತಿಂಗಳ ಒಳಗಾಗಿ ನಿರ್ಮಾಣ ಮಾಡುವುದಾಗಿ ಆಸನೌರವರಿಗೆ ನಿರ್ದೇಶನ ಇದ್ದು ಈ ಬಗ್ಗೆ 2014-15ನೇ ಸಾಲಿನ 14ನೇ ಹಣಕಾಸು ಯೋಜನೆಯಲ್ಲಿ ಕ್ರಿಯಾ ಯೋಜನೆಯನ್ನು ರೂಪಿಸಿ ಅನುಧಾನ ಬಿಡುಗಡೆಯಾಗಿದ್ದು ಅಂದಾಜುಪಟ್ಟಿಯನ್ನು ತಯಾರಿಸಿದ್ದು ಸದರಿ ಕಾಮಗಾರಿ ನಿರ್ವಹಣೆ ಮಾಡಿದ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಅಂತಾ ಇರುತ್ತದೆ. ಪಿಡಬ್ಲ್ಯೂ-1 ಇವರು ತಮ್ಮ ಸಾಕ್ಷಿಯಲ್ಲಿ ಮೇಲೆ ಹೇಳಿದ 2 ನಿವೇಶನ ನಡುವಿನ ಜಾಗದಲ್ಲಿ ಚರಂಡಿ ನಿರ್ವಹಿಸಲು ಗ್ರಾಮಪಂಚಾಯತಿ ವತಿಯಿಂದ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ, ತಾನು ಈ ಬಗ್ಗೆ ಆಸನೌರವರಿಗೆ ಪ್ರಶ್ನಿಸಿದಾಗ ಗ್ರಾಮಸ್ಥರು ಇದಕ್ಕೆ ತಕರಾರು ನೀಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಈ ಬಗ್ಗೆ ದಾಖಲಾತಿಯನ್ನು ಕೇಳಿದಾಗ ಆಸನೌರವರು ಯಾವುದೇ ತಕರಾರು ಅರ್ಜಿಯನ್ನು ತೋರಿಸಿರುವುದಿಲ್ಲ ಹಾಗೂ ಚರಂಡಿಯನ್ನು ನಿರ್ಮಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಪಿಡಬ್ಲ್ಯೂ-1ರವರು ನಿ.ಪಿ.14ರಲ್ಲಿ ಪುಟ 24 ರಿಂದ 206 ಪುಟಗಳ ದಾಖಲಾತಿಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಅದರಲ್ಲಿ ದಾಖಲಾತಿಯ ಅನುಕ್ರಮ ಸಂಖ್ಯೆ:126 ರಲ್ಲಿ ಆಸನೌರವರು ದಿ:16-03-2015 ರಂದು ತಹಶೀಲ್ದಾರ, ಮಧುಗಿರಿ

ರವರಿಗೆ ಒಂದು ಪತ್ರವನ್ನು ಬರೆದುಕೊಂಡಿದ್ದು ಸದರಿ ಪತ್ರದಲ್ಲಿ ಸರ್ವೇ ನಂ.124/6ಎ ಮತ್ತು 124/6ಬಿರಲ್ಲಿ ಹಿಂದೆ 1979ರಲ್ಲಿ ಭೂಪರಿವರ್ತನೆಯಾಗಿದ್ದು ಸದರಿ ನಿವೇಶನಗಳಲ್ಲಿ ಈಗಾಗಲೇ ಮನೆಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಆದರೆ ಸರ್ವೇ ನಂ.124/6ಎ ರವರ ದಾಖಲೆಗಳಲ್ಲಿ 15 ಅಡಿ ಪೂರ್ವಕ್ಕೆ ಮತ್ತು 124/6ಬಿ ರವರ ದಾಖಲೆಗಳಲ್ಲಿ ಪಶ್ಚಿಮಕ್ಕೆ 8 ಅಡಿಗಳ ರಸ್ತೆಯೆಂದು ನೋಂದಣಿಯಾಗಿರುವ ಕ್ರಯಪತ್ರದ ದಾಖಲೆಯೆಂದು ಇರುತ್ತದೆ ಆದರೆ ಇದರ ಬಗ್ಗೆ ಸಾರ್ವಜನಿಕರು ಮಾನ್ಯ ಉಪವಿಭಾಗಾಧಿಕಾರಿಗಳು, ಮಧುಗಿರಿ ಇವರಿಗೆ ದೂರನ್ನು ಸಲ್ಲಿಸಿರುತ್ತಾರೆ. ಆದುದರಿಂದ ತಾವುಗಳು ಸದರಿ ರಸ್ತೆಯನ್ನು ಅಳತೆ ಮಾಡಿ ಗುರುತಿಸಿಕೊಡಲು ಕೋರಿದ್ದು ಹಾಗೂ ಸದರಿ ರಸ್ತೆ ಬದಿಯಲ್ಲಿ ಸಾರ್ವಜನಿಕ ಚರಂಡಿ ಮಾಡಿಸಲು ತುಂಬಾ ತೊಂದರೆಯಾಗಿರುತ್ತದೆ ತುರ್ತಾಗಿ ಸದರಿ ಪ್ರದೇಶವನ್ನು ಅಳತೆ ಮಾಡಿ ಚರಂಡಿ ಮಾಡಿಸಲು ಅನುಕೂಲ ಮಾಡಿಕೊಡಬೇಕಾಗಿ ಕೇಳಿಕೊಂಡಿರುತ್ತಾರೆ.

21. ಕ್ರಿಯಾ ಯೋಜನೆಯಲ್ಲಿ ಈ ಚರಂಡಿಗೆ 40ಸಾವಿರ ರೂ.ಗಳನ್ನು ಬಿಡುಗಡೆ ಮಾಡಿದ್ದರೂ ಸಹಿತ ರಸ್ತೆಯ ಬಗ್ಗೆ ಸಾರ್ವಜನಿಕರಿಂದ ತಕರಾರು ಇರುವುದರಿಂದ ಚರಂಡಿ ಕೆಲಸ ಆಗಿರುವುದಿಲ್ಲ ಅಂತಾ ಮೇಲಿನ ದಾಖಲೆಯಂತೆ ಕಂಡುಬರುತ್ತದೆ. ನಿ.ಪಿ.14ರಲ್ಲಿ ದಾಖಲಾತಿಯ ಅನುಕ್ರಮ ಸಂಖ್ಯೆ:137ರಲ್ಲಿ ಊರಿನ ಜನರು ದೂರನ್ನು ಸಲ್ಲಿಸಿದ್ದು ಸದರಿ ದೂರಿನಲ್ಲಿ ಮೇಲೆ ಹೇಳಿದ 2ಸರ್ವೇ ನಂಬರ್ ಮಧ್ಯ ಅಪೂರ್ಣಗೊಂಡಿರುವ ಚರಂಡಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ದೂರನ್ನು ಸಲ್ಲಿಸಿದ್ದು ಇರುತ್ತದೆ. ನಿ.ಪಿ.14ರಲ್ಲಿ ದಾಖಲಾತಿ ಸಂಖ್ಯೆ:130ರಲ್ಲಿ ಇದೇ ದೂರುದಾರರು ದಿ:9-3-2015 ರಂದು ಉಪವಿಭಾಗಾಧಿಕಾರಿಗಳು, ಮಧುಗಿರಿ ಇವರಿಗೆ ಪತ್ರವನ್ನು ಬರೆದಿದ್ದು, ಅದರಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ಅಲಿನೇಷನ್ ಮಾಡಿಸಿ ನಿವೇಶನಗಳನ್ನು ವಿಂಗಡಿಸಿರುವ ಸರ್ವೇ ಸಂಖ್ಯೆ 124/6ಎ ಮತ್ತು 124/6ಬಿ ಈ 2ಜಮೀನುಗಳ ಮಧ್ಯ ರಸ್ತೆಗೆಂದು ಬಿಟ್ಟಿರುವ ಅಳತೆಯ ಬಗ್ಗೆ ಗೊಂದಲದ ದಾಖಲಾತಿಗಳನ್ನು ನೀಡಿರುವುದು ಕಾಮಗಾರಿ ವಿಳಂಭಕ್ಕೆ ಕಾರಣವಾಗಿದ್ದು ಸದರಿ ಜಮೀನಿನ ಮಾಲೀಕರೆ ಈಗ ಚರಂಡಿ ಕಾಮಗಾರಿಗೆ ಅಡ್ಡಗಾಲು ಹಾಕಿರುವುದು ದೊಡ್ಡ ಸಮಸ್ಯೆಯಾಗಿರುತ್ತದೆ. ಆದ್ದರಿಂದ ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಸಲ್ಲಿಸಿರುತ್ತಾರೆ.

ಇದನ್ನು ಪರಿಶೀಲಿಸಿದಾಗ ದೂರುದಾರರು ಒಪ್ಪಿಕೊಂಡಿರುವ ಹಾಗೆ ಸದರಿ ಜಮೀನಿನ ಮಾಲೀಕರೆ ಚರಂಡಿಯ ಕಾಮಗಾರಿ ಬಗ್ಗೆ ತೊಂದರೆ ಮಾಡಿರುತ್ತಾರೆ ಅಂತಾ ಕಂಡುಬರುತ್ತದೆ.

22.ನಿ.ಪಿ.14ರಲ್ಲಿ ದಾಖಲಾತಿ ಸಂಖ್ಯೆ 192ರಲ್ಲಿ ಉಪವಿಭಾಗಾಧಿಕಾರಿ, ಮಧುಗಿರಿ ಉಪವಿಭಾಗ ಇವರು ತಹಶೀಲ್ದಾರ, ಮಧುಗಿರಿ ರವರಿಗೆ ದಿ:7-9-2015ರಂದು ಒಂದು ಪತ್ರವನ್ನು ಬರೆದಿದ್ದು ಸದರಿ ಪತ್ರದಲ್ಲಿ ಸರ್ವೇ ನಂ.124/6ಎ ಮತ್ತು 124/6ಬಿ ರಲ್ಲಿನ ರಸ್ತೆಯನ್ನು ಅಳತೆ ಮಾಡಿಸಿ ಗುರುತಿಸಿಕೊಡಲು ಕೋರಿರುವುದು ಈ ಕಾರ್ಯಾಲಯಕ್ಕೆ ಬಂದಿರುವ ಉಲ್ಲೇಖ ಪತ್ರದ ಪ್ರತಿಯಿಂದ ತಿಳಿದುಬಂದಿರುತ್ತದೆ. ಈ ಬಗ್ಗೆ ಕ್ರಮವಹಿಸಿ ವರದಿಯನ್ನು ಸಲ್ಲಿಸಲು ಕೇಳಿಕೊಂಡಿದ್ದು ಇರುತ್ತದೆ. ನಿ.ಪಿ.14ರಲ್ಲಿ ದಾಖಲಾತಿ ಸಂಖ್ಯೆ:197ರಲ್ಲಿ ತಹಶೀಲ್ದಾರ, ಮಧುಗಿರಿ ರವರು ಆಸನೌರವರಿಗೆ ದಿ:11-01-2016ರಂದು ಒಂದು ಪತ್ರವನ್ನು ಬರೆದು ಅದರಲ್ಲಿ ಮೇಲಿನ ಸರ್ವೇ ನಂಬರ್‌ಗಳಿಗೆ ರಸ್ತೆ ಅಳತೆ ಮಾಡಿಕೊಡಲು ಕೇಳಿಕೊಂಡಿರುತ್ತಾರೆ. ಆದರೆ ಇದರ ಬಗ್ಗೆ ತಾಲ್ಲೂಕು ಸರ್ವೇಯರ್ ಸ್ಥಳ ಪರಿಶೀಲಿಸಿ ಇದರ ಮೂಲ ದಾಖಲಾತಿಗಳನ್ನು ಸಲ್ಲಿಸದೇ ಇರುವುದರಿಂದ ಅಳತೆ ಮಾಡಲು ಸಾಧ್ಯವಿಲ್ಲವೆಂದು ಹಾಗೂ ಸದರಿ ಮೂಲ ದಾಖಲಾತಿಗಳನ್ನು ಸಲ್ಲಿಸಿದರೆ ಅಳತೆ ಮಾಡಲಾಗುವುದೆಂದು ತಿಳಿಸಿರುತ್ತಾರೆ.

23.ಅದೇ ರೀತಿ ನಿ.ಪಿ.14ರಲ್ಲಿ ದಾಖಲಾತಿ ಸಂಖ್ಯೆ 199ರಲ್ಲಿ ಆಸನೌರವರು ದಿ:2-4-2016ರಂದು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಮಧುಗಿರಿ ಇವರಿಗೆ 2ಸರ್ವೇ ನಂಬರ್‌ಗಳ ಬಗ್ಗೆ ಹದ್ದುಬಸ್ತು ಮಾಡಕೊಡುವ ಬಗ್ಗೆ ಪತ್ರವನ್ನು ಬರೆದುಕೊಂಡಿರುತ್ತಾರೆ. ಈ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ ಚರಂಡಿಯ ನಿರ್ಮಾಣದ ಬಗ್ಗೆ ತಕರಾರು ಇರುವುದರಿಂದ ಚರಂಡಿ ನಿರ್ಮಾಣ ಪೂರ್ಣಗೊಂಡಿರುವುದಿಲ್ಲ ಅಂತಾ ಕಂಡುಬರುತ್ತಿದೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಈ ಅಂಶವನ್ನೂ ಸಹಾ ಶಿಸ್ತು ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ.

24.ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ-1ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

25.**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.**

## ಆದೇಶ

ಆ.ಸ.ನೌಕರ **ಶ್ರೀ. ಆರ್ ನಾಗರಾಜು,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಡಿಗೇನಹಳ್ಳಿ ಗ್ರಾಮ ಪಂಚಾಯತ್ (ಪ್ರಸ್ತುತ ಹಂದಿಗುಂಟ ಗ್ರಾಮ ಪಂಚಾಯತ್), ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌರವರ ನಿವೃತ್ತಿ ದಿನಾಂಕ: 31/12/2026 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

10/2/22

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Hanumantharayappa B.S S/o Late Sanjeevappa, Kodigenahalli, Madhugiri Taluk, Tumkur District. |
| | **PW-2** | Sri. Anand Kumar G S/o Gowda Hanumappa, DD, KBADA, Bengaluru. |
| | **PW-3** | Sri. Doddasiddaiah S/o Doddaiah, Executive Officer, Taluk Panchayath, Madhugiri. |
| 2 | **Documents marked on behalf of the Disciplinary Authority Ex.P-1 to Ex.P-15** | |
| | **Ex.P.1 & 1(a)** | Complaint given to this institution dtd: 06/04/2015 with Signature. |
| | **Ex.P.2 & 2(a)** | Form No.1 with Signature. |
| | **Ex.P.3 & 3(a)** | Form No.2 with Signature (Affidavit). |
| | **Ex.P.4** | Letter dtd: 04/03/2014 submitted to Secretary, Kodigenahalli Gram Panchayath, Kodigenahalli. |
| | **Ex.P.5** | Letter dtd: 15/03/2014 addressed to EO, Taluk Panchayath, Madhugiri. |
| | **Ex.P.6** | Letter dtd: 02/04/2014 submitted to PDO, Kodigenahalli Gram Panchayath, Kodigenahalli, Madhugiri Taluk, Tumkur. |
| | **Ex.P.7** | Letter dtd: 24/05/2014 of PDO, Kodigenahalli Gram Panchayath, Kodigenahalli. |
| | **Ex.P.8** | Letter dtd: 06/05/2014 submitted to Deputy |

| | | |
|---|---|---|
| | | Secretary, Zilla Panchayath, Tumkur. |
| | **Ex.P.9** | Letter dtd: 06/05/2017 submitted to Public Relation Officer, Tumkur. |
| | **Ex.P. 10** | Letter dtd: 26/05/2014 submitted to EO, Taluk Panchayath, Madhugiri. |
| | **Ex.P. 11** | Letter dtd: 06/05/2014 submitted to DC, Tumkur District. |
| | **Ex.P. 12 & 13** | Rejoinder of the complainant with Signature. |
| | **Ex.P. 14** | Documents pertaining to Ex.P.12. |
| | **Ex.P. 15** | Letter dtd: 20/07/2015 EO, Taluk Panchayath, Madhugiri with Signature. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. R. Nagaraju S/o P. Rangappa, PDO, Handikunte Gram Panchayath, Sira Taluk, Tumkur District. |
| 4 | **Documents marked on behalf of the DGOs through the complainant** | |
| | **Ex.D.1** | Letter dtd: 30/06/2015 addressed to EO, Taluk Panchayath, Tumkur. |
| | **Ex.D.2** | Office note by President, Kodigenahalli Gram Panchayath, Madhugiri Taluk, Tumkur. |
| | **Ex.D.3** | Letter dtd: 17/07/2015 addressed to EO, Taluk Panchayath, Madhugiri. |
| | **Ex.D.4** | Form No.9. |
| | **Ex.D.5** | Xerox copy of photographs. |

| | | |
|---|---|---|
| | **Ex.D.6** | Letter dtd: 09/07/2015 addressed to AEE, BESCOM, Kodigenahalli. |
| | **Ex.D.7** | Letter dtd: 09/06/2015 addressed to AC, Madhugiri Sub-Division, Madhugiri. |
| | **Ex.P.8** | Xerox copy of photographs. |
| | **Ex.D.9** | Circular dtd: 06/06/2003. |
| | **Ex.D.10** | Circular dtd: 28/01/2004 of RDPR. |

Dated this the 10th February, 2022

Sd/- 10/2/22

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.